ಇಲ್ಲದೆಯೇ ಎಷ್ಟೋ ಸಮಯ ವ್ಯರ್ಥವಾಗುತ್ತಿದೆ. ನಮ್ಮ ಎಷ್ಟೋ ಕಾಲ ನಮ್ಮ ಗಮನಕ್ಕೆ ಬಾರದೆ, ಮನಸ್ಸಿಗೆ ಬಾರದೆ ನಮ್ಮ ಬೆರಳ ಸಂಧಿಯಿಂದಲೇ ಜಾರಿಹೋಗುತ್ತಿದೆ! ನಾವೇನು ನಮ್ಮ ಸಮಯವನ್ನು ಸದುಪಯೋಗ ಮಾಡುತ್ತಿದ್ದೇವೆಯೆ? ಕಾಲದ ಅಪವ್ಯಯ ಎಷ್ಟು ಆಗುತ್ತಿದೆ, ನೋಡಿ. ನಾವು ಅದರ ಲೆಕ್ಕ ಇಡುತ್ತಿದ್ದೇವೆಯೆ? ಮನಸ್ಸನ್ನು ಒಂದೇ ವಿಚಾರದಲ್ಲಿ ನಿಯೋಜಿಸುತ್ತಿದ್ದೇವೆಯೆ?

**ಪ್ರಶ್ನೆ: ಸ್ವಾಮೀಜಿ, ಯಾವ ವಿಚಾರದಲ್ಲಿ ಮನಸ್ಸನ್ನು ತೊಡಗಿಸ ಬಹುದು?**


**ಸ್ವಾಮೀಜಿ :** ಒಂದೇ ವಿಚಾರದಲ್ಲಿ ಮನಸ್ಸನ್ನು ತೊಡಗಿಸ ಬೇಕು. ಅದೆಂದರೆ ಜೀವನದಲ್ಲಿ ಒಂದು ಗುರಿಯನ್ನು ನಿಶ್ಚಯಿಸಿ ಅದರಲ್ಲಿ ಸ್ಥಿರವಾಗಿ ನಿಲ್ಲುವುದು. ನಮಗೆ ಸಿಕ್ಕಿದಷ್ಟು ಸಮಯವನ್ನು ಸರ್ವಪ್ರಯತ್ನದಿಂದ ಈ ಉದ್ದೇಶದತ್ತ ಸಾಗಲು ನಾವು ನಿಯೋಜಿಸಿದ್ದೇವೆಯೆ? ಚಿಂತಿಸಿನೋಡು. ಪ್ರತಿಯೊಬ್ಬರ ಜೀವನದಲ್ಲಿಯೂ ಕಳೆದಹೋದ ಸಮಯವನ್ನು ಲೆಕ್ಕಹಾಕಿ ನೋಡು. ಎಷ್ಟು ಸಮಯ ವ್ಯರ್ಥವಾಗಿ ಹೋಗಿದೆ! ಎಷ್ಟು ಸಮಯವನ್ನು ನಷ್ಟ ಮಾಡಿದ್ದೇವೆ! ಬರೀ ಮಾಡಿದ್ದಷ್ಟೇ ಅಲ್ಲ, ಈಗಲೂ ಹಾಗೆಯೇ ಮಾಡುತ್ತಿದ್ದೇವೆ. ಚಿಂತಿಸಿ ನೋಡು. ನಮ್ಮ ಜೀವನದಲ್ಲಿ ಒಂದು ಉದ್ದೇಶವನ್ನು ನೆಲೆಗೊಳಿಸಿಕೊಳ್ಳಲು ಅದೆಷ್ಟು ವರ್ಷಗಳು ಕಳೆದುಹೋದವು? ಈ ಗುರಿ ನಿರ್ಧರಿಸಿ ಬಹಳ ವರ್ಷಗಳು ಕಳೆದರೂ, ಅದರೆಡೆಗೆ ಮುಂದುವರಿಯಲು ನಾವು ಏನಾದರೂ ಪ್ರಯತ್ನ ಮಾಡು ತ್ತಿದ್ದೇವೆಯೆ? ಯಾವ ಅಲ್ಪಸ್ವಲ್ಪ ಪ್ರಯತ್ನವನ್ನು ಮಾಡು ತ್ತಿದ್ದೇವೆಯೋ, ಅದೂ ಆ ಕಡೆ, ಈ ಕಡೆ ಸರಿದುಹೋಗುತ್ತಿದೆ. ನೇರವಾಗಿ ಮುಂದುವರಿಯಲು ನಮಗೆ ಆಗುತ್ತಿಲ್ಲ. ಒಂದು ಮೈಲಿಯ ರಸ್ತೆಯನ್ನು ಕ್ರಮಿಸಲು ಹತ್ತು ಮೈಲುಗಳಷ್ಟು ಸಮಯ ಪೋಲಾಗಿ ಹೋಗುತ್ತಿದೆ. ಆದರೂ ಮನಸ್ಸಿನಲ್ಲಿ ವ್ಯರ್ಥ ವಿಚಾರಗಳು ಈಗಲೂ ನಡೆಯುತ್ತಿವೆ. ಅದಕ್ಕಾಗಿ ನಾವು ಇಲ್ಲಿಗೆ (ಆಶ್ರಮಕ್ಕೆ) ಬಂದಿಲ್ಲ. ಆತ (ಭಗವಂತ) ಸಿಕ್ಕಿಲ್ಲವೆಂದು, ಆತನ ಕಡೆಗೆ ಹೋಗುತ್ತಿಲ್ಲವೆಂದು ನಮ್ಮ ಮನಸ್ಸಿನಲ್ಲಿ ಕ್ಷೋಭೆ, ದುಃಖ ಆಗುತ್ತಿದೆಯೆ?

ನಮ್ಮ ಆದರ್ಶ, ಉದ್ದೇಶಗಳಲ್ಲಿ ನಮಗೆ ಸ್ಪಷ್ಟತೆ ಇರ ದಿದ್ದರೆ ನಮ್ಮ ಸಮಯ ವಿನಾಕಾರಣ ನಷ್ಟವಾಗುತ್ತದೆ. ಅದು ಹೇಗೆಂದರೆ ನನ್ನ ಬಾಲ್ಯದ ವಿಚಾರ ನಿಮಗೆ ಹೇಳುತ್ತೇನೆ. ಹುಡುಗನಾಗಿರುವಾಗಲೇ ಸಾಧುವಾಗವಾಗಬೇಕೆಂಬ ಇಚ್ಛೆ ನನಗಿತ್ತು. ಆದರೆ ಯಾರನ್ನು 'ಸಾಧು' ಎಂದು ಕರೆಯುತ್ತಾರೆ ಎಂಬುದು ಗೊತ್ತಿರಲಿಲ್ಲ. ಅದಕ್ಕಾಗಿ ಒಮ್ಮೊಮ್ಮೆ ಉದ್ದುದ್ದ ಕೂದಲು ಬಿಡುವುದು ಅಥವಾ ಇನ್ನೊಮ್ಮೆ ತಲೆ ಬೋಳಿ ಸುವುದು ಮಾಡುತ್ತಿದ್ದೆ.

ನಾವು ಶ್ರೀರಾಮಕೃಷ್ಣರ ಜೀವನವನ್ನು ನೋಡಿದಾಗ, ಅವರ ಹತ್ತಿರ ಬಂದ ವಿಭಿನ್ನ ಮನೋಧರ್ಮಗಳ ಜನರು ವಿಭಿನ್ನ ಅಭಿಪ್ರಾಯಗಳನ್ನು ಇಟ್ಟುಕೊಂಡಿರುವುದು ಕಂಡುಬರುತ್ತದೆ. ಹಾಗೆ ಇರುವುದರಲ್ಲೇನೂ ಆಶ್ಚರ್ಯವಿಲ್ಲ. ಕಾರಣ ಶ್ರೀರಾಮ ಕೃಷ್ಣರಲ್ಲಿ ಆ ವೈಚಿತ್ರ್ಯ ಇತ್ತು. ನಮ್ಮ ಮನಸ್ಸಿನಲ್ಲಿ ಎಷ್ಟು ಪರಿ ವರ್ತನೆ ಆಗುತ್ತದೋ, ಅಷ್ಟು ನಮ್ಮ ಆದರ್ಶದ ಸ್ಪಷ್ಟತೆ ಕೂಡ ಒಡಮೂಡುತ್ತದೆ. ಹೀಗೆ ಆದರ್ಶವು ವಿಕಾಸವಾಗುತ್ತದೆ. ಅಂದರೆ, ದೂರದಿಂದ ಒಂದು ಮನೆಯು ಅಸ್ಪಷ್ಟವಾಗಿ ಗೋಚರಿಸುತ್ತದೆ; ರೇಖಾಚಿತ್ರ ಇದ್ದಹಾಗೆ. ಮನೆಯ ಹತ್ತಿರ ಹತ್ತಿರ ಹೋದ ಹಾಗೆ ಅದು ಸ್ಪಷ್ಟವಾಗಿ ಕಾಣುತ್ತದೆ. ಆದರ್ಶವು ಕೂಡ ಹಾಗೆಯೇ. ✴

ವಿವೇಕಾನಂದ ಕಥಾಂಜಲಿ

## ಸಿಂಹ ರವಿ



ಘೋರ ರಾತ್ರಿ ಬಂದಿತ್ತು!
ತಮವೇರಿ ಯುಗವೆ ಸಂದಿತ್ತು
ಕಾರುಣ್ಯ ಕಾಂತಿ ಚಂದಿರ ಮುಳುಗಿತ್ತು
ಭೂಮಿಯಿಂದ ಬಹುದೂರ ದೂರ ಅತಿ
ದೂರ ತಾರೆ ಅಲ್ಲಲ್ಲೊಂದಿತ್ತು,
–ಘೋರ ರಾತ್ರಿ ಬಂದಿತ್ತು.

ಮೃಗಜಾತಿ ನಾಡ ನುಗ್ಗಿತ್ತು
ನರಜಾತಿ ಕಾಡಿಗೊಗ್ಗಿತ್ತು,
ಕಡೆಗಣ್ಣ ಹೊಳಪೆ ಖಡುಗಗಳ ಝಳಪೆ
ನಡೆವರಿಗೆ ದೀಪವಾಗಿತ್ತು!
ಘೋರ ರಾತ್ರಿ ಬಂದಿತ್ತು.

ಜಡ ಜನತೆ ಚಳಿಗೆ ನಡುಗಿತ್ತು
ಮಡಿಮಡಿಕೆ ಮುಸುಕಿನೊಳಗಡಗಿತ್ತು
ಪಡುಬಾನ ಮಿಂಚು ಬಡಿದಿತ್ತು !
ಮನೆಮಠದ ಮಾಡು ಮಗುಚಿತ್ತು
ಹೌಹಾರಿ ಕಣ್ಣು ತೆರೆದಿತ್ತು,
ಘೋರಾಂಧಕಾರವಾಗಿತ್ತು !

ಬಟ್ಟೆಯಿಲ್ಲ ನೆಲೆಯಿಲ್ಲ ಕಣ್ಣುಗಳ
ಕೊಟ್ಟ ವಿಧಿಯೆ ಕುರುಡಾಗಿಸಿತಲ್ಲಾ !
ಸೃಷ್ಟಿಕರ್ತ ನೀನುಂಟೋ? ಇಲ್ಲಾ?
ಕಷ್ಟವಿದಕೆ ಕೊನೆಯುಂಟೋ? ಇಲ್ಲಾ?
ಎಂದು ಮಂದಿ ರೋರೋದಿಸಿತು
ಭಾರತಮಾನಸ ಮಂಥಿಸಿತು
ಭೂಸಾಗರವು ತರಂಗಿಸಿತು!

ಏನು ಸೋಜಿಗವೋ ಪೂರ್ವದಿಗಂತದಿ ತೋರಿತು ಕೆಂಬಣ್ಣ!
ಚೈತನ್ಯದಂಡ ಬಿರಿದೆದ್ದ ಹಂಸಶಿಶು ಕಾಣಿಸಿತು ಕಣ್ಣ.
ನರಗುವರನ ಕಣ್ಬನಿಯಾಯಿತು ನಕ್ಷತ್ರ ಸಪ್ತವರ್ಣ !
ಕಾಷಾಯ ಕೇಸರವ ಕೆದರಿ
ಮೊಗದೋರಿತು ಸಿಂಹರವಿ
ಹಗಲಾಯಿತು ಸಕಲಭುವಿ !

– ಸೇಡಿಯಾಪು ಕೃಷ್ಣಭಟ್ಟ

# ವಿದ್ಯಾರ್ಥಿಗಳಿಗಾಗಿ ಪಂಚಶೀಲ

ಸ್ವಾಮಿ ಜಗದಾತ್ಮಾನಂದ

## ೨. ಶ್ರದ್ಧೆ

ಶ್ರದ್ಧೆ ಎಂದರೆ ಸಾಮಾನ್ಯ ನಂಬಿಕೆಯಲ್ಲ. ಈ ಮೂರು ವಿಷಯಗಳಲ್ಲಿ ಪೂರ್ಣ ವಿಶ್ವಾಸ:

**೧. ತನ್ನ ದಿವ್ಯತೆಯಲ್ಲಿ, ತನ್ನಲ್ಲಿ ಅಡಗಿರುವ ಅಪಾರ ಶಕ್ತಿಯಲ್ಲಿ**

**೨. ಸರ್ವಶಕ್ತನಾದ ಭಗವಂತನಲ್ಲಿ**

**೩. ಸದ್ಗುಣಗಳಿಂದಲೇ ನಿಜವಾದ ಯಶಸ್ಸು ಎನ್ನುವ ವಿಶ್ವದ ನೈತಿಕ ನಿಯಮ ಅಥವಾ ಧರ್ಮದಲ್ಲಿ**

ಮನುಷ್ಯನ ಅಂತರಂಗದಲ್ಲಿ ದಿವ್ಯತೆಯಿದೆ. ಇದು ಸಚ್ಚಿದಾನಂದದ ಕಿಡಿ; ದೈವೀಶಕ್ತಿ. ಈ ದಿವ್ಯತೆಯಲ್ಲಿರುವ ದೃಢವಿಶ್ವಾಸದ ಮೂಲಕವಾಗಿ ನಮ್ಮ ಪಾಲಿಗೆ ಬಂದೊದಗುವ ಒಂದು ಪ್ರಮುಖ ಗುಣವೇ ಭರವಸೆ, ಎಂದೆಂದೂ ನಿರಾಶಾವಾದಕ್ಕೆಳಸದ ಭಾವನೆ ಮತ್ತು ಭವ್ಯಭವಿಷ್ಯದಲ್ಲಿ ನಂಬಿಕೆ. ಯಾವುದೇ ಸಂಕಟಮಯ ಸನ್ನಿವೇಶ ಬಂದೊದಗಿದರೂ ಅದರ ಹಿನ್ನೆಲೆಯಲ್ಲಿ ಸಾಮಾನ್ಯ ದೃಷ್ಟಿಗೆ ನಿಲುಕದ ಒಂದು ನಿಯಮ ಕೆಲಸಮಾಡುತ್ತಿದೆ ಎಂಬ ನಂಬಿಕೆಯೇ ಈ ಭರವಸೆಯ ಪೋಷಕಶಕ್ತಿ. ಈ ನಿಯಮವು, **'ನನ್ನ ಅಭ್ಯುದಯದ ರಹಸ್ಯಸೂತ್ರವು ನನ್ನ ಕೈಯಲ್ಲೇ ಇದೆ'** ಎಂಬುದನ್ನು ತಡವಾಗಿಯಾದರೂ ತಿಳಿಸಿಕೊಡುತ್ತದೆ. ನಮಗೆ ನಿಕಟವಾಗಿರುವ ಮತ್ತು ಸರ್ವತ್ರ ಸರ್ವವ್ಯಾಪಿಯಾಗಿರುವ ಆ ದಿವ್ಯ ವಿಶ್ವ ನಿಯಾಮಕ ಶಕ್ತಿಯು ನಮ್ಮನ್ನು ಪೀಡಿಸುವುದಕ್ಕಾಗಿ ಇಲ್ಲ; ನಮ್ಮನ್ನು ಉದ್ಧಾರದ ಹಾದಿಯಲ್ಲಿ ನಡೆಸುವುದಕ್ಕಾಗಿ ಇದೆ. ನಮ್ಮ ಮನಸ್ಸಿನ ನೇರಕ್ಕೆ ಸರಿಯಾಗಿ ಎಲ್ಲವೂ ನಡೆಯಬೇಕೆಂದು ಬಯಸದೆ ಕಷ್ಟಕಾಲದಲ್ಲೂ ಆ ಶಕ್ತಿಯ ಮೊರೆಹೋಗಿ, ಮುನ್ನಡೆಯಬೇಕು.

ನಮ್ಮ ಪ್ರಯತ್ನವನ್ನು ಬಿಡದೆ ಮುಂದುವರೆಸುತ್ತಿದ್ದರೆ ಉದ್ಧಾರ ಖಂಡಿತ. **"ಓ ದೇವರೇ! ಪ್ರಯತ್ನದ ಬೆಲೆಯನ್ನು ತೆತ್ತಾಗ ನೀನು ಪ್ರತಿಯೊಂದನ್ನೂ ಅನುಗ್ರಹಿಸುತ್ತೀಯೆ"** ಎಂಬ ಲಿಯೊನಾರ್ಡೊ ಡ ವಿಂಚಿಯ ಮಾತು ಅಕ್ಷರಶಃ ಸತ್ಯ. ಸ್ವಾಮಿ ವಿವೇಕಾನಂದರು ಹೇಳುವಂತೆ, "ಈ ಜಗತ್ತಿನ ಇತಿಹಾಸ ಆತ್ಮಶ್ರದ್ಧೆಯನ್ನು ಹೊಂದಿದ್ದ ಕೆಲವೇ ವ್ಯಕ್ತಿಗಳ ಇತಿಹಾಸ. ಆ ಶ್ರದ್ಧೆಯು ಅಂತರಂಗದ ದಿವ್ಯತೆಯನ್ನು ಬಡಿದೆಬ್ಬಿಸುತ್ತದೆ, ಆಗ ನೀವೇನನ್ನು ಬೇಕಾದರೂ ಸಾಧಿಸಬಲ್ಲಿರಿ." ನಾವು ಭಗವಂತನ ಮಕ್ಕಳೆಂದೂ, ಅವನ ಅಂಶಗಳೆಂದೂ, ಅವನ ಅನಂತ ಶಕ್ತಿ ಮತ್ತು ಆನಂದದ ಪಾಲುದಾರರೆಂದೂ ನಂಬುವುದೇ ಆತ್ಮಶ್ರದ್ಧೆ.

ಎಲ್ಲ ಧರ್ಮಗಳೂ ಭಗವಂತನಲ್ಲಿ ಶ್ರದ್ಧೆಯನ್ನು ಬೋಧಿಸುತ್ತವೆ. ಆದರೆ ಸಂಕುಚಿತತೆ, ಮತಾಂಧತೆ ದೇವರನ್ನೂ ಆಯಾಯ ಧರ್ಮಗಳಿಗೆ ಸೀಮಿತಗೊಳಿಸಿ ಪರಧರ್ಮದ ದೇವರ ಬಗ್ಗೆ ಅಸಹನೆ, ದ್ವೇಷ ಮತ್ತು ಹಿಂಸೆಗೆ ಕಾರಣವಾಗುವಂತೆ ಮಾಡಿದೆ. ನಾವು ಶ್ರದ್ಧೆಯಿಡಬಹುದಾದ್ದು ಯಾರೂ ತಿರಸ್ಕರಿಸಲಾಗದ, ಸರ್ವತ್ರ ಸರ್ವವ್ಯಾಪಿಯಾದ, ಅಚಿಂತ್ಯ ಶಕ್ತಿಯಾದ ಪರಮಾತ್ಮನ ಅಸ್ತಿತ್ವದಲ್ಲಿ ಮಾತ್ರ. "ನಮ್ಮ ಅರಿವು ನುಗ್ಗಲಾರದ, ಸಂಶೋಧಿಸಲಾಗದ, ಆ ಪರಮಾದ್ಭುತದಿಂದಲೇ, ವಿಸ್ಮಯವೆನಿಸಿದ ಈ ಬ್ರಹ್ಮಾಂಡ, ಅದರ ಹೊಳೆಯುವ ಸೌಂದರ್ಯ ವ್ಯಕ್ತವಾಗುತ್ತಿದೆ" ಎಂಬ ಐನ್‌ಸ್ಟೀನ್‌ರ ಮಾತು ಇಲ್ಲಿ ಮನನೀಯ.

ದೇವರನ್ನು ಕುರಿತ ಸಂಕುಚಿತ ಭಾವನೆಗಳ ಬಿಗಿಹಿಡಿತದಿಂದ ನಮ್ಮನ್ನು ನಾವು ಬಿಡಿಸಿಕೊಳ್ಳಬೇಕು. ಪರಮಾರ್ಥ ಸತ್ಯವು ಯಾವುದೇ ಒಂದು ಆವಿರ್ಭಾವಕ್ಕೆ ಸೀಮಿತವಲ್ಲ, ಒಂದು ಅವತಾರ ಅಥವಾ ಒಬ್ಬ ಪ್ರವಾದಿಯ ಬೋಧನೆಗೇ ಸೀಮಿತವಲ್ಲ ಎಂಬ ಉದಾರ ದೃಷ್ಟಿ ಬೆಳೆಯದೆ, ಧಾರ್ಮಿಕರಲ್ಲಿ ಪರಸ್ಪರ ದ್ವೇಷ, ಜಗಳ, ಬಡಿದಾಟ ನಿಲ್ಲದು. ವಿಜ್ಞಾನಕ್ಕೆ ಸಮ್ಮತವಾದ, ಎಲ್ಲರೂ ಒಪ್ಪಲೇಬೇಕಾದ ಈ ವಿಶ್ವವಿಶಾಲ ಭಾವನೆ ನಮ್ಮ ಭಾರತೀಯ ಋಷಿಪರಂಪರೆಯದು.

ಭಗವಂತನು ಎಲ್ಲೆಲ್ಲೂ ಇದ್ದಾನೆ, ಎಲ್ಲಾ ಜೀವಜಂತುಗಳಲ್ಲೂ ಇದ್ದಾನೆ ಎಂದಾಗ, ನಮಗೆ ಆತನಲ್ಲಿ ನಿಜವಾದ ಶ್ರದ್ಧೆ ಇರುವುದಾದರೆ, ಎಲ್ಲಾ ಜೀವಜಂತುಗಳ ಮೇಲೂ ನಮ್ಮ ಪ್ರೀತಿ ಕಾಳಜಿಗಳು ಉಕ್ಕಿಹರಿಯಬೇಕಲ್ಲವೆ? ಪ್ರೀತಿ ವ್ಯಕ್ತವಾಗುವುದು ತ್ಯಾಗ ಸೇವೆಗಳ ಮೂಲಕವಲ್ಲವೆ? ಭಗವಂತನಲ್ಲಿಡುವ ದೃಢಶ್ರದ್ಧೆಯು ಆತ್ಮಶ್ರದ್ಧೆಗೂ, ಸತ್ಕರ್ಮದಿಂದಲೇ ಶ್ರೇಯಸ್ಸು, ಯಶಸ್ಸು, ವಿಜಯ ಎನ್ನುವ ಶ್ರದ್ಧೆಗೂ ಕಾರಣವಾಗುವುದು. ಶ್ರದ್ಧೆಯ ಮಹಿಮೆಯನ್ನು ಅಧ್ಯಾತ್ಮವಾದಿಯೂ ಕೊಂಡಾಡುತ್ತಾನೆ, ವಿಜ್ಞಾನಿಯೂ ಕೊಂಡಾಡುತ್ತಾನೆ.

ಶ್ರದ್ಧೆ ಮೈಗೂಡಲು ಪ್ರಯತ್ನವೆಂಬ ಸಮುದ್ರಕ್ಕಿಳಿಯಲೇ ಬೇಕು. ಎಷ್ಟು ಬಾರಿ ವಿಫಲರಾದರೂ ಮತ್ತೂ ಬಿಡದೆ ಆಧ್ಯಾತ್ಮಿಕ ರಾಜ್ಯದಲ್ಲಿ ಪ್ರಯತ್ನ ಮುಂದುವರಿಸಬೇಕು. ಶ್ರದ್ಧೆಯಿಂದ ಭಯವನ್ನು ಹೋಗಲಾಡಿಸಿ, ಆತ್ಮವಿಶ್ವಾಸದಿಂದ ಮುನ್ನಡೆಯಬಹುದು. ನಂಬಿಕೆ ಅಥವಾ ವಿಶ್ವಾಸ ಎಂದರೆ ವೈರುಧ್ಯ ಅಥವಾ ನಿಷೇಧಾತ್ಮಕವಲ್ಲದ ಕಲ್ಪನೆಗಳ ಸಾರ. ವಿಶ್ವಾಸವು ಅನುಭವದಿಂದ ದೃಢಪಡಿಸಿಕೊಂಡ ಭಾವನೆ, ಹಲವಾರು ಪ್ರಯೋಗಗಳಿಂದ ರಚನಾತ್ಮಕವಾಗಿ ಸರಿಪಡಿಸಿಕೊಂಡ ಕಲ್ಪನೆ. ಸುಪ್ತಮನಸ್ಸಿನಲ್ಲಿ ಭಯ ಯಾತನೆಗಳು ಹುದುಗಿ ನಮ್ಮ ವರ್ತನೆಯನ್ನು ಆಳುತ್ತವೆ. ಮಕ್ಕಳು ಮಾಡುವ